## ತಾಯಿ ಭಾಷೆ

ರಾತ್ರಿ ಹೋಂವರ್ಕ್ ಮಾಡುತ್ತ ಕುಳಿತಿದ್ದ ಪುಟ್ಟುಗೆ ಬಿಟ್ಟಸ್ಥಳ ತುಂಬಬೇಕಾಗಿತ್ತು. ತಂದೆಗೆ ಕೇಳಿದ 'ಅಪ್ಪಾ, ಇದರಲ್ಲಿ ಮದರ್ ಟಂಗ್ ಅಂತ ಕೊಟ್ಟಿದ್ದಾರೆ. ಅದರ ಮುಂದೆ ಏನಂತ ಬರಿಲಿ?' ಟೀವಿ ನೋಡುತ್ತ ಕುಳಿತಿದ್ದ ತಂದೆ ಹೇಳಿದ, 'ತುಂಬ ಉದ್ದ ಎಂದು ಬರಿ ಕಂದ...'

**ಶೋಭಾ ಪ್ರಮೋದ್**





ಚಿತ್ರಗಳು: ಗಣೇಶ ಆಚಾರ್ಯ

## ಇದೂ ಉಚಿತವೇ?

ಜಿಪುಣಾಗ್ರೇಸರ ಚಕ್ರವರ್ತಿ ಗುಂಡಯ್ಯಶೆಟ್ಟರ ಪತ್ನಿ ಗರ್ಭಿಣಿಯಾದಳು. ಖರ್ಚು ಹೆಚ್ಚಾಗುವುದೆಂಬ ಕಾರಣಕ್ಕೆ ಶೆಟ್ಟರು ಹೆಚ್ಚು ಸಂತೋಷವೇನೂ ಪಡಲಿಲ್ಲ. ದಿನ ತುಂಬಿ, ಮನೆಯಾಕೆ ಹೆರಿಗೆಬೇನೆ ಎಂದಾಗ ತಕ್ಷಣವೇ ಪಕ್ಕದ ರಸ್ತೆಯಲ್ಲಿದ್ದ ಪಿಜ್ಜಾ ಹಟ್‌ಗೆ ಕರೆದುಕೊಂಡು ಬಂದರು. ಆಕೆ, 'ಯಾಕ್ರೀ ಇಲ್ಲಿಗೆ ಈಗ ಕರ್ಕೊಂಡು ಬಂದ್ರಿ?' ಎಂದು ಪ್ರಶ್ನಿಸಿದಾಗ, ಶೆಟ್ಟರು 'ಸುಮ್ನೇ ಇರೇ, ಇಲ್ಲಿ ಫ್ರೀ ಡೆಲಿವರಿ ಅಂತ ಬರೆದಿದ್ದಾರೆ' ಅಂದರು...

**ಸಿ.ಆರ್. ಪುಷ್ಪ**